## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1624 |
| ಸದಸ್ಯರ ಹೆಸರು: | ಶ್ರೀ ಗೋವಿಂದರಾಜು |
| ಉತ್ತರಿಸಬೇಕಾದ ದಿನಾಂಕ: | 18.03.2026 |
| ಉತ್ತರಿಸಬೇಕಾದ ಸಚಿವರು: | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

*********

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ತಿರುಪತಿ - ತಿರುಮಲದಲ್ಲಿರುವ ಕರ್ನಾಟಕ ಭವನದಲ್ಲಿ ನಿರ್ಮಾಣವಾಗಿರುವ ಒಟ್ಟು ಕೊಠಡಿಗಳ ಸಂಖ್ಯೆ ಎಷ್ಟು? ಪ್ರತಿ ಕೊಠಡಿಗಳಿಗೆ ಸರ್ಕಾರ ನಿಗದಿಪಡಿಸಿರುವ ಬಾಡಿಗೆ ದರವೆಷ್ಟು? | ಆಂಧ್ರಪ್ರದೇಶ ತಿರುಮಲ ಕರ್ನಾಟಕ ರಾಜ್ಯ ಛತ್ರದ ಸಮಗ್ರ ಅಭಿವೃದ್ಧಿ ಯೋಜನೆಯಡಿ ನಿರ್ಮಾಣವಾಗಿರುವ ಮತ್ತು ಉನ್ನತೀಕರಿಸಿರುವ ಕೊಠಡಿಗಳ ವಿವರ ಮತ್ತು ನಿಗದಿಪಡಿಸಿರುವ ಬಾಡಿಗೆ ದರದ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ. |
| (ಆ) | ಮುಜರಾಯಿ ಸಚಿವರನ್ನು ಒಳಗೊಂಡಂತೆ, ಇನ್ನಿತರ ಸಚಿವರು, ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು, ಲೋಕಸಭಾ ಮತ್ತು ರಾಜ್ಯ ಸಭಾ ಸದಸ್ಯರಿಗೆ ವರ್ಷಕ್ಕೆ ಇಂತಿಷ್ಟು ಕೊಠಡಿಗಳನ್ನು ಕ್ಷೇತ್ರದ ಜನರಿಗೆ ಶಿಫಾರಸ್ಸು ಮಾಡಲು ಅವಕಾಶ ಇದೆಯೇ? | ಆಂಧ್ರಪ್ರದೇಶ ತಿರುಮಲ ಕರ್ನಾಟಕ ರಾಜ್ಯ ಛತ್ರದ ವಸತಿಗೃಹಗಳ ಶೇಕಡಾ 80ರಷ್ಟು ಕೊಠಡಿಗಳನ್ನು ಯಾತ್ರಾರ್ಥಿಗಳು ಮುಂಗಡವಾಗಿ, ಆನ್‌ಲೈನ್ ವೆಬ್ ಪೋರ್ಟಲ್ **www.Karnatakatemplesaccommodation.com** ಮೂಲಕ ಕಾಯ್ದಿರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಛತ್ರದ ವಸತಿ ಗೃಹದ ಕೊಠಡಿಗಳನ್ನು ಮಾನ್ಯ ಘನತೆವೆತ್ತ ರಾಜ್ಯಪಾಲರು, ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ನ್ಯಾಯಾಧೀಶರುಗಳ, ಮಾನ್ಯ ಕೇಂದ್ರ ಸಚಿವರು, ಮಾನ್ಯ ಲೋಕಸಭಾ ಸದಸ್ಯರು, ಮಾನ್ಯ ವಿಧಾನಸಭಾ/ವಿಧಾನ ಪರಿಷತ್ತಿನ ಸದಸ್ಯರು, ಮಾನ್ಯ ಶಾಸಕರುಗಳ ಕಛೇರಿಗಳಿಂದ ನೀಡುವ ಶಿಫಾರಸ್ಸು ಪತ್ರಗಳಿಗೆ ಆದ್ಯತೆಯ ಮೇರೆಗೆ ಕೊಠಡಿಗಳ ಲಭ್ಯತೆಗೆ ಅನುಗುಣವಾಗಿ ಹಂಚಿಕೆ ಮಾಡಲಾಗುತ್ತಿದೆ. |
| (ಇ) | ಪ್ರಸ್ತುತ ಇರುವಂತಹ ಸಿಬ್ಬಂದಿಗಳಿಂದ ಇಷ್ಟೊಂದು ಕೊಠಡಿಗಳ ನಿರ್ವಹಣೆ ಮಾಡುವುದು ತುಂಬಾ ಕಷ್ಟಕರವಾಗಿರುವ ಹಿನ್ನಲೆಯಲ್ಲಿ "ಕರ್ನಾಟಕ ಪ್ರವಾಸೋದ್ಯಮ ಇಲಾಖೆಗೆ " ಜವಾಬ್ದಾರಿ ನೀಡಿದರೆ ಸ್ವಚ್ಛತೆ, ಕಾರ್ಯನಿರ್ವಹಣೆ ಹಾಗೂ ಭಕ್ತರೊಂದಿಗೆ ಸೌಹಾರ್ದತೆಯಿಂದ ಸಹಕರಿಸಲು ಅನುಕೂಲವಾಗುವುದಿಲ್ಲವೇ? | ತಿರುಮಲದಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಹಳೇಬೀಡು, ಹಂಪಿ ಮತ್ತು ಐಹೊಳೆ ಬ್ಲಾಕ್ ವಸತಿಗೃಹಗಳ ನಿರ್ವಹಣೆಯನ್ನು ಹೊರ ಗುತ್ತಿಗೆ ಆಧಾರದಲ್ಲಿ ನಿರ್ವಹಿಸಲು ಖಾಸಗಿ ಸಂಸ್ಥೆಯವರಿಗೆ ಟೆಂಡರ್ ಮೂಲಕ ನೀಡಲಾಗಿರುತ್ತದೆ<br><br>ಸದರಿ ಸಂಸ್ಥೆಯವರು ಅಸಮರ್ಪಕವಾಗಿ ನಿರ್ವಹಣೆ ಮಾಡುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಸದರಿ ಸಂಸ್ಥೆಯವರ 2025ನೇ ಸಾಲಿನ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಗಳ ನಿರ್ವಹಣಾ ವೆಚ್ಚದ ಬಿಲ್ಲಿನಲ್ಲಿ ದಂಡದ ರೂಪದಲ್ಲಿ ಶೇ.20ರಷ್ಟು ಕಡಿತಗೊಳಿಸಲಾಗಿದೆ.<br><br>ಮುಂದುವರೆದು, ಕರ್ನಾಟಕ ರಾಜ್ಯ ಛತ್ರದ ವಸತಿ ಗೃಹಗಳ ನಿರ್ವಹಣೆಯ ಬಗ್ಗೆ ಹಲವಾರು ದೂರುಗಳು ಕೇಳಿಬರುತ್ತಿರುವ ಮೇರೆಗೆ ಸದರಿ ವಸತಿ ಗೃಹಗಳನ್ನು ಉತ್ಕೃಷ್ಟವಾಗಿ ನಿರ್ವಹಿಸುವ ಸಲುವಾಗಿ, ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ(ಕೆ.ಎಸ್.ಟಿ.ಡಿ.ಸಿ)ದವರಿಗೆ ವಹಿಸುವ ಕುರಿತು ದಿನಾಂಕ: 09.02.2026 ರಂದು ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿರುತ್ತದೆ. |
| (ಈ) | ಕೊಠಡಿ ಕಾಯ್ದಿರಿಸುವಿಕೆಯನ್ನು ಆನ್ ಲೈನ್ ಮೂಲಕವಲ್ಲದೇ "ಬೆಂಗಳೂರು ಒನ್" ನಿಂದಲೂ ಕೊಠಡಿಯನ್ನು ಕಾಯ್ದಿರಿಸಲು ಅವಕಾಶ ಕಲ್ಪಿಸಿಕೊಡಲಾಗಿದೆಯೇ? | ಭಕ್ತಾದಿಗಳ ಸೌಕರ್ಯಕ್ಕಾಗಿ ಹಾಗೂ ಛತ್ರದ ಆಡಳಿತಾತ್ಮಕ ಹಿತದೃಷ್ಟಿಯಿಂದ ಭಕ್ತಾದಿಗಳು ಕೊಠಡಿಗಳನ್ನು ಮುಂಗಡವಾಗಿ www.Karnatakatemplesaccommodation.com ಈ ಅಧಿಕೃತ ವೆಬ್ ಪೋರ್ಟಲ್ ಹಾಗೂ ಮೊಬೈಲ್ ಆಪ್ ಮೂಲಕ ಮಾತ್ರ ಕಾಯ್ದಿರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ತಿರುಮಲ ಕರ್ನಾಟಕ ರಾಜ್ಯ ಛತ್ರದ ಹಳೇಬೀಡು, ಹಂಪಿ ಮತ್ತು ಐಹೊಳೆ ಬ್ಲಾಕ್‌ನಲ್ಲಿ ಲಭ್ಯವಿರುವ ಕೊಠಡಿಗಳಲ್ಲಿ, **ಶೇಕಡಾ 80 ರಷ್ಟು ಆನ್ ಲೈನ್** ಮೂಲಕ ಮತ್ತು **ಶೇಕಡಾ 20 ರಷ್ಟು ಆಫ್‌ಲೈನ್** ಮೂಲಕ ಕಾಯ್ದಿರಿಸಲು ಅವಕಾಶವಿರುತ್ತದೆ.<br><br>ಬೆಂಗಳೂರು ಒನ್ ಮೂಲಕ ಕೊಠಡಿಗಳನ್ನು ಕಾಯ್ದಿರಿಸಲು ಅವಕಾಶ ಕಲ್ಪಿಸುವ ಪ್ರಸ್ತಾವನೆಯು ಇರುವುದಿಲ್ಲ. |
| ಉ) | ಆನ್ ಲೈನ್ ಮೂಲಕ ಕೊಠಡಿಗಳನ್ನು ಕಾಯ್ದಿರಿಸುವ ಪದ್ಧತಿಯಲ್ಲಿ ರಾಜ್ಯದ ಭಕ್ತಾದಿಗಳಿಗೆ ಶೇಕಡಾ 50 ರಷ್ಟು ಮತ್ತು ಉಳಿದಂತೆ ಬೇರೆ ಬೇರೆ ರಾಜ್ಯದವರಿಗೆ ಶೇಕಡಾ 50 ರಷ್ಟು ಕಾಯ್ದಿರಿಸಲು ಅನುಕೂಲವಾಗುವಂತೆ, ನೂತನವಾಗಿ ಸಾಫ್ಟ್‌ವೇರ್ ಸಿದ್ಧಪಡಿಸುವ ಬಗ್ಗೆ ಸರ್ಕಾರ ಆಲೋಚಿಸಿದೆಯೇ; | ಭಕ್ತಾದಿಗಳ ಸೌಕರ್ಯಕ್ಕಾಗಿ ಹಾಗೂ ಛತ್ರದ ಆಡಳಿತಾತ್ಮಕ ಹಿತದೃಷ್ಟಿಯಿಂದ, ಭಕ್ತಾದಿಗಳ ಕೊಠಡಿಗಳನ್ನು ಮುಂಡಗವಾಗಿ www.Karnatakatemplesaccommodation.com ಈ ಅಧಿಕೃತ ವೆಬ್ ಪೋರ್ಟಲ್ ಹಾಗೂ ಮೊಬೈಲ್ ಆಪ್ ಮೂಲಕ ಮಾತ್ರ ಕಾಯ್ದಿರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ವೆಬ್‌ಸೈಟ್‌ನಲ್ಲಿ ಕರ್ನಾಟಕದ ನಿವಾಸಿಗಳು ಮಾತ್ರ ಕೊಠಡಿಗಳನ್ನು ಮುಂಚಿತವಾಗಿ ಕಾಯ್ದಿರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಸದರಿ ವಸತಿ ಗೃಹಗಳಲ್ಲಿ ಲಭ್ಯವಿರುವ ಕೊಠಡಿಗಳಲ್ಲಿ ಈ ಹಿಂದೆ ಶೇ.60ರಷ್ಟು ಆನ್ ಲೈನ್ ಮೂಲಕ ಮತ್ತು ಶೇ.40 ರಷ್ಟು ಆಫ್ ಲೈನ್ ಮೂಲಕ ಕಾಯ್ದಿರಿಸಲು ಅವಕಾಶ ಕಲ್ಪಿಸಲಾಗಿತ್ತು. ಈ ವ್ಯವಸ್ಥೆಯ ಬಗ್ಗೆ ಹಲವಾರು ದೂರುಗಳು ಕೇಳಿಬಂದಿರುವ ಮೇರೆಗೆ, ಆನ್ ಲೈನ್ ಸೌಲಭ್ಯವನ್ನು ಶೇ.80 ರಷ್ಟು ಹಾಗೂ ಆಫ್ ಲೈನ್ ಶೇ.20 ರಷ್ಟು ಕೊಠಡಿಗಳನ್ನು ಕಾಯ್ದಿರಿಸಲು ದಿನಾಂಕ:17.01.2026ರಂದು ಆದೇಶಿಸಿ ಜಾರಿಗೊಳಿಸಲಾಗಿರುತ್ತದೆ<br><br>ಅತಿ ಶೀಘ್ರದಲ್ಲೇ ಕೊಠಡಿಗಳ ಕಾಯ್ದಿರಿಸುವಿಕೆಯ ಜಾಲವನ್ನು NIC (National Informatics Centre) ಅಂತರ್ ಜಾಲಕ್ಕೆ Migrate ಮಾಡಲು ಕ್ರಮವಹಿಸಲಾಗುತ್ತಿದೆ. |
| ಊ) | ಕೊಠಡಿಗಳು ಲಭ್ಯತೆ ಇಲ್ಲದಂತಹ ಪರಿಸ್ಥಿತಿಯಲ್ಲಿ ರಾಜ್ಯದ ಭಕ್ತಾದಿಗಳಿಗೆ ಅನುಕೂಲವಾಗಲು ಸಾಮೂಹಿಕವಾದ ಸ್ನಾನದ ಕೊಠಡಿ ಮತ್ತು ವಸ್ತ್ರ ಬದಲಾಯಿಸಲು ಗಂಡಸರಿಗೆ ಮತ್ತು ಹೆಂಗಸರಿಗೆ ಪ್ರತ್ಯೇಕವಾದ ಕೊಠಡಿಗಳ ವ್ಯವಸ್ಥೆ ಮಾಡಲಾಗಿದೆಯೇ; ಇದನ್ನು ಉಚಿತವಾಗಿ ನೀಡುವ ಬಗ್ಗೆ ಸರ್ಕಾರ ಆಲೋಚಿಸಿದೆಯೇ? | ತಿರುಮಲ ಕರ್ನಾಟಕ ರಾಜ್ಯ ಛತ್ರದಲ್ಲಿರುವ ಕೊಠಡಿಗಳು ಲಭ್ಯತೆ ಇಲ್ಲದಂತಹ ಪರಿಸ್ಥಿತಿಯಲ್ಲಿ, ಶ್ರೀ ಕ್ಷೇತ್ರಕ್ಕೆ ಆಗಮಿಸುವ ಯಾತ್ರಾರ್ಥಿಗಳಿಗೆ ಡಾರ್ಮಿಟರಿಗಳಲ್ಲಿ ಸ್ನಾನದ ಗೃಹ ಹಾಗೂ ಶೌಚಾಲಯಗಳನ್ನು ಉಚಿತವಾಗಿ ಉಪಯೋಗಿಸಿಕೊಳ್ಳಲು ಅನುಕೂಲ ಕಲ್ಪಿಸಿಕೊಡಲಾಗುತ್ತಿದೆ ಹಾಗೂ ವಸ್ತ್ರ ಬದಲಾಯಿಸಲು ಗಂಡಸರಿಗೆ ಮತ್ತು ಹೆಂಗಸರಿಗೆ ಡಾರ್ಮಿಟರಿಯಲ್ಲಿ ಪ್ರತ್ಯೇಕವಾದ ಸ್ಥಳಾವಕಾಶ ನೀಡಲಾಗುತ್ತಿದೆ. |
| ಋ) | ಪ್ರಸ್ತುತ ಇರುವ ಕೊಠಡಿಯ ಬಾಡಿಗೆಯು ತುಂಬಾ ದುಬಾರಿಯಾಗಿರುವುದರಿಂದ, ಬಾಡಿಗೆ ಹಣವನ್ನು ಕಡಿಮೆ ಮಾಡುವುದರ ಬಗ್ಗೆ ಸರ್ಕಾರ ಆಲೋಚಿಸಿದೆಯೇ? | ಈ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವವಿರುವುದಿಲ್ಲ. |

ಸಂಖ್ಯೆ: ಕಂಇ 89 ಮುಸಪ್ರ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

# ಪ್ರಶ್ನೆ ಸಂಖ್ಯೆ 1420 (1624) (ಅ) -ಅನುಬಂಧ

| ಕ್ರ. ಸಂ | ಕಟ್ಟಡಗಳ ವಿವರ | ಕೊಠಡಿಗಳ ವಿವರ | ನಿಗದಿಪಡಿಸಿರುವ ದರ ಜಿ.ಎಸ್.ಟಿ ಹೊರತುಪಡಿಸಿ (ರೂ.ಗಳಲ್ಲಿ) | ಷರಾ |
|---|---|---|---|---|
| (1) | ಹಂಪಿ ಬ್ಲಾಕ್ | 71 AC ಕೊಠಡಿಗಳು | 2,500/- | - |
| | | 39 AC Suits | 3,500/- | |
| (2) | ಐಹೊಳೆ ಬ್ಲಾಕ್ | 132 Non AC ಕೊಠಡಿಗಳು | 1,350/- | - |
| | | 12 ಡಾರ್ಮೆಟರಿ | 300/- (ಒಬ್ಬರಿಗೆ) | |
| (3) | ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಕಲ್ಯಾಣ ಮಂಟಪ. | ಕಲ್ಯಾಣ ಮಂಟಪ | 2,50,000/- | ವಿದ್ಯುತ್, ನೀರು, ಸ್ವಚ್ಛತಾ ಹಾಗೂ ಜಿ.ಎಸ್.ಟಿ ಸೇರಿ ಒಟ್ಟು ಮೊತ್ತ ರೂ.3,42,200/- |
| (4) | ಶ್ರೀಕೃಷ್ಣದೇವರಾಯ ಬ್ಲಾಕ್ | 36 VVIP ಕೊಠಡಿಗಳು | - | ಕಟ್ಟಡದ ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ. |
| (5) | ಹಳೇಬೀಡು (ಕೆಪಿಎಸ್ ಉನ್ನತೀಕರಣ) | 86 ಕೊಠಡಿಗಳು | 900/- | ಪ್ರಸ್ತುತ ಕಟ್ಟಡದ ಉನ್ನತೀಕರಣ ಕಾರ್ಯ ನಡೆಯುತ್ತಿದ್ದು, ಸಧ್ಯ ನವೀಕರಣಗೊಂಡ 30 ಕೊಠಡಿಗಳನ್ನು ಮಾತ್ರ ಯಾತ್ರಾರ್ಥಿಗಳಿಗೆ ಒದಗಿಸಲಾಗುತ್ತಿದೆ. |

ಆಯುಕ್ತರ ಪರವಾಗಿ
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು



File No. RD/89/MSPA/2026-MUZ-REVENUE DEPATMENT SEC (Computer No. 2106711)